**ಓಎಸ್ ನಂಃ 67/2015**
**ಪಿಡಬ್ಲೂಃ 2**

**<u>ಸಾಕ್ಷಿಗೆ ದಿನಾಂಕ 13-02-2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು</u>**

<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ವಿ.ಎಮ್.ಎ. ವಕೀಲರಿಂದ</u>

ನಾನು ಇಂದು ನ್ಯಾಯಾಲಯಕ್ಕೆ ಸರ್ವೆ ನಂಬರ್ 100 ರ ಕುರಿತು ಸಾಕ್ಷ್ಯ ನುಡಿಯಲು ಬಂದಿರುತ್ತೇನೆ. ನನಗೆ ಅಂಬೂ ಬಾಯಿಯವರ ಪರಿಚಯ ನಾನು ಚಿಕ್ಕವನಾಗಿದ್ದಾಗಿಂದ ಇದೆ. ಅಂಬೂ ಬಾಯಿಯವರಿಗೆ ನ್ಯಾಯಾಲಯದ ಆದೇಶದ ಪ್ರಕಾರ ದಾವಾ ಆಸ್ತಿಯ ಮಾಲಿಕತ್ವ ಬಂದಿರುತ್ತದೆ. ತಹಶೀಲ್ದಾರ್ ಚಿತ್ತಾಪುರ ರವರು ಈ ದಾವೆ ಹಾಕುವ ಪೂರ್ವದಲ್ಲಿ ಸರ್ವೆ ನಂಬರ್ 100 ರ 14 ಎಕ್ರೆ 34 ಗುಂಟೆ ಜಾಗವನ್ನು ಕಬ್ಜಾ ತೆಗೆದುಕೊಂಡು ಪಹಣಿ ಪತ್ರಿಕೆಯಲ್ಲಿ ಸರಕಾರದ ಹೆಸರನ್ನು ನಮೂದು ಮಾಡಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರಿದು ನನ್ನ ಪ್ರಕಾರ ವಾದಿ ಈಗಲೂ ದಾವಾ ಆಸ್ತಿಯ ಕಬ್ಜ ಹೊಂದಿದ್ದಾರೆಂದು ನುಡಿಯುತ್ತಾರೆ. ಸದರಿ ತಹಶೀಲ್ದಾರ್ ಆದೇಶದ ವಿರುದ್ಧ ವಾದಿಯರು ಅಥವಾ ಉಳಿದ ಜನರು ಮೇಲ್ಮನವಿ ಸಲ್ಲಿಸಿದ ಬಗ್ಗೆ ನನಗೆ ಮಾಹಿತಿ ಇಲ್ಲ. ನನಗೆ ಈಗ ದಾವಾ ಆಸ್ತಿಯ ಕಬ್ಜೆ ಯಾರ ಬಳಿ ಇದೆ ಎಂದು ಗೊತ್ತಿಲ್ಲ. ಸರಕಾರದವರು ಪ್ರತಿವಾದಿಗೆ ದಾವಾ ಆಸ್ತಿಯನ್ನು ಲೀಸ್ ಮೇಲೆ ನೀಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿಗೆ ಸಹಾಯ ಮಾಡಲು ಆಕೆಯ ಕಬ್ಜಾ ಇದೆ ಎಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮಗೆ ಈ ದಾವೆ ಯಾವುದರ ಕುರಿತು ಹಾಕಲಾಗಿದೆ ಎಂದು ಗೊತ್ತಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ. ಹೇ . ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು,
ಚಿತ್ತಾಪೂರ.